

# ಸ್ವಾಮಿ ವಿವೇಕಾನಂದರು ಮತ್ತು ಮಹಾತ್ಮಾ ಗಾಂಧಿ

ಭಾಗ ೨

ಪ್ರೊ .ಜಿ.ಎಸ್.ಜಯದೇವ

ಜನಸಾಮಾನ್ಯರ ಬದುಕಿನ ಈ ಬವಣೆಯನ್ನು ನಿವಾರಿಸಲು ಗಾಂಧೀಜಿಯವರು ಸ್ವಾತಂತ್ರ್ಯಸಂಗ್ರಾಮದ ನಡುವೆಯೂ ಅವಿರತವಾಗಿ ಶ್ರಮಿಸಿದರು. ಅವರ ಸರ್ವೋದಯ ಅಂತ್ಯೋದಯ ಎಂಬುದರ ಆದರ್ಶವೆಂದರೆ ಎಲ್ಲರ ಅಭಿವೃದ್ಧಿಯನ್ನು, ಸಮಾಜದ ಕಟ್ಟಕಡೆಯ ಮನುಷ್ಯನನ್ನೂ ಒಳಗೊಂಡು ಸಾಧಿಸುವುದು. ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಕಟ್ಟಕಡೆಯ ಮನುಷ್ಯ ಕೇವಲ ಫಲಾನುಭವಿಯಾಗಿ ಉಳಿಯುವುದಿಲ್ಲ. ಬದಲಾಗಿ ಭಾಗೀದಾರನಾಗಿ ಸರ್ವೋದಯ ಕಾರ್ಯದಲ್ಲಿ ಪಾಲ್ಗೊಳ್ಳುತ್ತಾನೆ. ಸಮಾಜದ ಕಟ್ಟಕಡೆಯ ಮನುಷ್ಯನ ಬಗ್ಗೆ ಗಾಂಧೀಜಿಯವರ ಪ್ರಸಿದ್ಧ ಹೇಳಿಕೆ ಹೀಗಿದೆ:

'I will give you a talisman. Whenever you are in doubt, or when the self becomes too much with you, apply the following test. Recall the face of the poorest and the weakest man whom you may have seen, and ask yourself, if the step you contemplate is going to be of any use to him.'

ಹೀಗೆ ಈ ಇಬ್ಬರು ಮಹನೀಯರೂ ಸಮಾಜದ ಬಹುಸಂಖ್ಯಾತ ದುರ್ಬಲವರ್ಗದ ಪರವಾಗಿ ದನಿಯೆತ್ತಿ ಕೆಲಸ ಮಾಡಿದರು. ವಿವೇಕಾನಂದರ ಧ್ವನಿ ತೀಕ್ಷ್ಣವಾಗಿತ್ತು, ಪ್ರಖರ ವೈಚಾರಿಕತೆಯಿಂದ ಕೂಡಿತ್ತು. ಆದರೆ ಗಾಂಧೀಜಿಯವರಿಗೆ ಅನುದಿನದ ಅನುಷ್ಠಾನವೇ ಮುಖ್ಯವಾಗಿತ್ತು. ಸಮಾಜದ ಎಲ್ಲ ದುರ್ಬಲ ವರ್ಗದವರಿಗಾಗಿ ದುಡಿಯುವುದು ಅವರ ಪಾಲಿಗೆ ಒಂದು ಜೀವನವಿಧಾನವೇ ಆಗಿಬಿಟ್ಟಿತ್ತು.

ಭಾರತಕ್ಕೆ ಸ್ವಾತಂತ್ರ್ಯ ಸಿಗುತ್ತದೆಯೆಂಬ ಭರವಸೆ ಈ ಇಬ್ಬರು ಮಹನೀಯರಿಗೂ ಇತ್ತು. ಆದರೆ ಸ್ವಾತಂತ್ರ್ಯಾನಂತರದ ಭಾರತದ ಅಭಿವೃದ್ಧಿ ಪಥಕ್ಕೆ ಒಂದು ನೀಲಿನಕ್ಷೆ ಬೇಕಲ್ಲವೆ? ಅಂತಹ ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ ಪಥದ ವಿವರಗಳನ್ನು ಗುರುತಿಸುವ ಮೊದಲು ಈ ಪಥಕ್ಕೆ ಅಡಚಣೆಯಾಗಿರುವ ತೊಡಕುಗಳನ್ನು ನಿವಾರಿಸಿಕೊಳ್ಳುವುದು ಬಹಳ ಮುಖ್ಯ. ಇಂತಹ ತೊಡಕುಗಳನ್ನು ಗುರುತಿಸುವಲ್ಲಿ ವಿವೇಕಾನಂದರು ಹಾಗೂ ಗಾಂಧೀಜಿಯವರ ನಡುವೆ ಅಸಾಧಾರಣ ಸಾಮ್ಯಗಳಿವೆ. ಸ್ವಾಮಿ ವಿವೇಕಾನಂದರು ಕೇವಲ ಮೂವತ್ತೊಂಬತ್ತು ವರ್ಷಗಳ ಕಾಲ ಜೀವಿಸಿದ್ದರಿಂದ ತಮ್ಮ ತತ್ತ್ವಗಳನ್ನು ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತರುವ ಸಾಧ್ಯತೆಗಳು ಇರಲಿಲ್ಲ. ಸಿಂಹಸದೃಶವಾದ ವಾಣಿಯಿಂದ ಅವರು ಮಲಗಿದ್ದ ಭಾರತವನ್ನು ಎಚ್ಚರಿಸಿದರು. ತಾವು ಕಂಡ ನವಭಾರತ ನಿರ್ಮಾಣದ ಕಾಣ್ಕೆಗಳನ್ನು ಸಾಕಾರಗೊಳಿಸಲು ಶ್ರಮಿಸುವವರು ಬಂದೇಬರುತ್ತಾರೆ ಎಂಬ ಭರವಸೆ ಅವರದು. ಈ ಭರವಸೆ ಹುಸಿಯಾಗಲಿಲ್ಲ. ಗಾಂಧೀಜಿಯವರನ್ನು ಯಾವ ಪಾರ್ಶ್ವದಿಂದ ನೋಡಿದರೂ ಅವರು ವಿವೇಕಾನಂದರ ಮುಂದುವರಿಕೆಯಾಗಿ ಕಾಣುತ್ತಾರೆ. ಗಾಂಧೀಜಿಯವರ ಮತ್ತು ಸ್ವಾಮೀಜಿಯವರ ಕನಸಿನ ಭಾರತದ ಅಭಿವೃದ್ಧಿ ಪಥಗಳ ನಡುವೆ ಅಸಂಖ್ಯಾತ ಸಾಮ್ಯಗಳಿವೆ.ಈ ಇಬ್ಬರು ಮಹನೀಯರ ಚಿಂತನೆಗಳು ಅಕ್ಷರರೂಪ ಪಡೆದಾಗಲೂ ಅದೇ ಶಬ್ದಗಳು ಬಳಕೆಯಾಗಿರುವುದು ಆಶ್ಚರ್ಯಕರವಾಗಿದೆ. ಶ್ರೀಸಾಮಾನ್ಯನ ನಿರ್ಲಕ್ಷ್ಯ, ಸಂಸ್ಕೃತಿ ಮತ್ತು ಅನುಕರಣೆ, ಗ್ರಾಮಭಾರತದ ಅಭಿವೃದ್ಧಿ, ಶಿಕ್ಷಣ, ಭಾಷೆ, ಆಧುನಿಕತೆಯ ವಿಮರ್ಶೆ, ನಮ್ಮ ವಿಶ್ವವಿದ್ಯಾಲಯಗಳು, ಸ್ತ್ರೀಸಮಾನತೆ ಮತ್ತು ಅತಿಯಾದ ಕೈಗಾರಿಕೀಕರಣಗಳ ಕುರಿತು ಈ ಇಬ್ಬರೂ ಒಂದೇ ಬಗೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಹಾಗಾಗಿ ಗಾಂಧೀಜಿಯವರು ಸ್ವಾಮಿ ವಿವೇಕಾನಂದರ ಮುಂದುವರಿಕೆಯಾಗಿ ಕಂಡುಬರುತ್ತಾರೆ. ಈ ಸಾಮ್ಯತೆಗಳನ್ನು ಕೂಲಂಕಷವಾಗಿ ಚರ್ಚಿಸೋಣ.

ಶ್ರೀಸಾಮಾನ್ಯನನ್ನು ಕಡೆಗಣಿಸಿರುವುದೇ ನಮ್ಮ ಅಧಃಪತನಕ್ಕೆ ಕಾರಣ ಎಂಬುದನ್ನು ಈ ಇಬ್ಬರು ಮಹನೀಯರೂ ಗುರುತಿಸಿ ಅವುಗಳ ಪರಿಣಾಮಗಳನ್ನು ವಿಶದಪಡಿಸಿದರು. ವಿವೇಕಾನಂದರು ದೇಶಪ್ರೇಮದ ಭಾಷೆಯನ್ನು ಬಳಸಿದರೆ ಗಾಂಧೀಜಿಯವರು ದೇಶಸೇವೆಯ ಭಾಷೆಯನ್ನು ಬಳಸಿದರು. ಎಪ್ಪತ್ತೆಂಟು ವರ್ಷಗಳ ಅವರ ಜೀವಮಾನದಲ್ಲಿ ದೇಶಸೇವೆಗೆ ವಿಪುಲ ಅವಕಾಶಗಳಿದ್ದವು.

'The mark of all civilizations is the respect they accord to human dignity and freedom.' ಆಧುನಿಕ ಕಾಲದಲ್ಲಿ ಮಾನವಹಕ್ಕುಗಳ ಅಂಗವಾಗಿ ಮನುಷ್ಯನ ಘನತೆಯನ್ನು ಮತ್ತು ಸ್ವಾತಂತ್ರ್ಯವನ್ನು ಗೌರವಿಸುವುದನ್ನು ಬದುಕಿನ ಬಹುಮುಖ್ಯ ಮೌಲ್ಯವಾಗಿ ಪರಿಗಣಿಸಲಾಗುತ್ತದೆ. ಆದರೆ ನಿರಂತರವಾಗಿ ಇದರ ಉಲ್ಲಂಘನೆಯಾಗುತ್ತಿದೆ. ಇದು

ವೈಚಾರಿಕ ಬಡತನದಿಂದಾಗಿ ಅಲ್ಲ; ಬದಲಾಗಿ ಮನುಷ್ಯನ ಭಂಡತನದಿಂದ ಎನ್ನಬೇಕು. ವೈಚಾರಿಕವಾಗಿ ಅರಿವಿದ್ದರೂ ಹೃದಯವಂತಿಕೆ ಇಲ್ಲದಿರುವುದೇ ಈ ಉಲ್ಲಂಘನೆಗೆ ಕಾರಣ. ಬದಲಾವಣೆಯ ಹರಿಕಾರರಾದ ವಿವೇಕಾನಂದರು ಮತ್ತು ಗಾಂಧೀಜಿ ಹೃದಯಕೇಂದ್ರಿತ ಪರಿವರ್ತನೆಯನ್ನು, ಬದಲಾವಣೆಯನ್ನು ನಮ್ಮ ಮುಂದಿಟ್ಟರು. ಗಾಂಧೀಜಿಯವರ ಸಮಾಜ ವ್ಯಕ್ತಿ ಕೇಂದ್ರಿತ ಸಮಾಜ. ವ್ಯಕ್ತಿ ತನ್ನ ವೈಯಕ್ತಿಕ ನೆಲೆಗಟ್ಟಿನಲ್ಲಿ ಬದಲಾಗುವ ಮೂಲಕ ಇಡೀ ಸಮಾಜದ ಬದಲಾವಣೆಗೆ ದಾರಿ ಮಾಡಿಕೊಡುತ್ತಾನೆ. ಇದಕ್ಕಾಗಿ ಗಾಂಧೀಜಿ ಜೀವವನ್ನೇ ತ್ಯಾಗ ಮಾಡಿದರು. ''ನೀನು ಕಾಣಬಯಸುವ ಬದಲಾವಣೆ ನೀನೇ ಆಗು'' ಎಂದು ಗಾಂಧೀಜಿ ಹೇಳಿದರೆ, ವಿವೇಕಾನಂದರು ತ್ಯಾಗವನ್ನು ಒತ್ತಿಹೇಳಿದರು. ''ಮಕ್ಕಳೇ, ನಿಮ್ಮ ಹೃದಯ-ಆತ್ಮಗಳನ್ನು ಸಮರ್ಪಿಸಿ ಕೆಲಸ ಮಾಡಿ. ಇತರರಿಗೆ ಒಳಿತು ಮಾಡುತ್ತ ನರಕಕ್ಕೆ ಹೋದರೆ ತಾನೆ ಏನು? ನಾನು ಹೇಳುತ್ತೇನೆ – ಹೀಗಾಗುವುದು ನಿಮಗಷ್ಟೇ ಗಳಿಸಿಕೊಳ್ಳುವ ಸ್ವರ್ಗಕ್ಕಿಂತ ಸಾವಿರ ಪಾಲು ಉತ್ತಮ'' ಎಂದರು.

ಗಾಂಧೀಜಿಯವರ ಸ್ವದೇಶಿ ಚಳುವಳಿ ಮತ್ತು ಉತ್ಪಾದನೆ ಶ್ರೀಸಾಮಾನ್ಯನನ್ನು ಗಮನದಲ್ಲಿ ಇಟ್ಟುಕೊಂಡು ರೂಪಿಸಿದ ಅಭಿವೃದ್ಧಿ ಪಥ. ಗ್ರಾಮಾಭ್ಯುದಯ ಅವರ ಅಭಿವೃದ್ಧಿಯ ಕೇಂದ್ರವಾಗಿತ್ತು. ಅವರ ಈ ಮಾತುಗಳನ್ನು ಗಮನಿಸಿ: 'I have believed and repeated times without number that India is to be found not in its few cities but in its 7,00,000 villages.' ಗಾಂಧೀಜಿಯವರ ಗ್ರಾಮಸ್ವರಾಜ್ಯ ಪರಿಕಲ್ಪನೆ ಗ್ರಾಮೀಣ ಬಡಜನರನ್ನು ಕುರಿತದ್ದೇ ಆಗಿದೆ. ಗ್ರಾಮೀಣ ಬಡಜನರಿಗೆ ಉದ್ಯೋಗ ದೊರೆಯಬೇಕೆಂಬುದು ಗಾಂಧೀಜಿಯವರ ಪ್ರಯತ್ನ. ಅದಕ್ಕಾಗಿ ಚರಕ ಮತ್ತು ಗುಡಿಕೈಗಾರಿಕೆಗಳನ್ನು ಅವರು ಮುಂದಿಟ್ಟರು.

ಹಸಿವು ಬಡತನಗಳು ವಿವೇಕಾನಂದರ ಪ್ರಮುಖ ಕಾಳಜಿಗಳಾಗಿದ್ದವು. ಮನುಷ್ಯನ ನೋವಿಗೆ ಸ್ಪಂದಿಸುವುದು ಅವರಿಗೆ ಕೆಲವೊಮ್ಮೆ ಧರ್ಮಕ್ಕಿಂತ ದೊಡ್ಡದಾಗಿ ಕಂಡಿದ್ದನ್ನು ನಾವು ಅರ್ಥ ಮಾಡಿಕೊಳ್ಳಬಹುದು. ''ಈ ದೇಶದ ಕಟ್ಟಕಡೆಯ ಒಂದು ನಾಯಿ ಹಸಿದಿರುವತನಕ ಆ ನಾಯಿಯ ಹಸಿವನ್ನು ತಣಿಸುವುದನ್ನು ನಾನು ಧರ್ಮ ಎಂದು ಭಾವಿಸುತ್ತೇನೆ. ಮಿಕ್ಕಿದ್ದೆಲ್ಲವೂ ಧರ್ಮವೇ ಅಲ್ಲ, ಅದೊಂದು ಪೊಳ್ಳು ಧರ್ಮ'' ಎಂದುಬಿಡುತ್ತಾರೆ ಅವರು.

ಇಂದು ಇಡೀ ದೇಶ ಅನುಕರಣೆಯ ರೋಗದಿಂದ ಸತ್ತ್ವಹೀನವಾಗಿದೆ. ಈ ಇಬ್ಬರೂ ಮಹನೀಯರು ಅನುಕರಣೆಯು ಅಧಃಪತನಕ್ಕೆ ದಾರಿ ಎಂದರು. ಅನುಕರಣೆಯ ಬಗೆಗೆ ವಿವೇಕಾನಂದರ ನುಡಿಗಳಿವು:

'Another great lesson we have to remember; imitation is not civilization. It is verily the sign of awful degradation in a man…learn everything that is good in others, but bring it in, and in your own way; absorb it, do not become others. Do not be dragged away out of this Indian life; do not for a moment think that it would be better for India if all the Indians dressed, ate and behaved like another race.'

ಅನುಕರಣೆಯ ಬಗ್ಗೆ ಗಾಂಧೀಜಿಯವರ ಮಾತು ವಿವೇಕಾನಂದರ ಪಡಿನುಡಿಯಂತಿದೆ.

'I don't want my house to be walled in on all sides and my windows to be stuffed. I want the cultures of all lands to be blown about my house as freely as possible. But I refuse to be blown off my feet by any.'

ಪಶ್ಚಿಮದ ಸಾಂಸ್ಕೃತಿಕ ಹೇರಿಕೆಯನ್ನು ಸ್ವಾಮಿ ವಿವೇಕಾನಂದರು ಹಾಗೂ ಗಾಂಧೀಜಿಯವರು ವಿರೋಧಿಸಿ ಭಾರತದ ವಿಶಿಷ್ಟ ಸಂಸ್ಕೃತಿಯನ್ನು ದಿನನಿತ್ಯದ ಬದುಕಾಗಿ ಅಳವಡಿಸಿಕೊಳ್ಳುವುದರ ಅಗತ್ಯವನ್ನು ಹೇಳುತ್ತಾರೆ. ಗಾಂಧೀಜಿ ಹೇಳುತ್ತಾರೆ: ಪಶ್ಚಿಮದ ಈ ಮಹಾಪ್ರವಾಹವನ್ನು ನಾನು ತಡೆಯಲಾರೆನು ಎಂಬ ಅಸಹಾಯಕತೆಗಳ ಉದ್ಗಾರವನ್ನು ಭಾರತವು ಎಂದೂ ತೆಗೆಯಕೂಡದು. ತನ್ನ ಹಾಗೂ ಜಗತ್ತಿನ ಹಿತಕ್ಕಾಗಿ ಈ ಪ್ರವಾಹವನ್ನು ತಡೆದು ನಿಲ್ಲಿಸಲು ಭಾರತವು ಸಮರ್ಥವಾಗಿರಲೇ ಬೇಕು.

ಯಂತ್ರನಾಗರಿಕತೆಯನ್ನು ಮತ್ತು ಕೈಗಾರಿಕೀಕರಣವನ್ನು ಈ ಇಬ್ಬರೂ ಮಹನೀಯರು ಒಪ್ಪಲಿಲ್ಲ. ಕೈಗಾರಿಕೀಕರಣವು ಶೋಷಣೆಯನ್ನಾಧರಿಸಿದೆ ಎಂಬುದೇ ಗಾಂಧೀಜಿಯವರ ವಾದ. ಸ್ಪರ್ಧೆ ಮತ್ತು ಶೋಷಣೆಗಳಿಲ್ಲದೆ ಕೈಗಾರಿಕೆಗಳು ನಡೆಯಲಾರವು. ಅಸಮಾನತೆಗೆ ಕಾರಣವಾಗುವ ಕೈಗಾರಿಕೆಗಳನ್ನು ಈ ಮಹನೀಯರಿಬ್ಬರೂ ಒಪ್ಪಲಿಲ್ಲ. ಗಾಂಧೀಜಿಯವರ ಮಾತುಗಳನ್ನು ನೋಡಿ:

'Pandit Nehru wants industrialisation because he thinks that if it is socialised, it would be free from the evils of capitalism. My own view is that evils are inherent in industrialism and no amount of socialisation can eradicate them.'

ಅವರ ಬಹುಚರ್ಚಿತ ಹಿಂದ್ ಸ್ವರಾಜ್ ಪುಸ್ತಕದಲ್ಲೂ ಯಂತ್ರನಾಗರಿಕತೆ ಮತ್ತು ಕೈಗಾರಿಕೀಕರಣದ ದುಷ್ಪರಿಣಾಮಗಳ ಕುರಿತು ಮಾತನಾಡಿದ್ದಾರೆ. ಅವರ ಈ ಮಾತುಗಳನ್ನು ಗಮನಿಸಿ:

'Industrialization is, I am afraid, going to be a curse for mankind. Exploitation of one nation by another cannot go on for all time. Industrialism depends entirely on your capacity

to exploit, on foreign markets being open to you, and on the absence of competitors . . . India, when it begins to exploit other nations - as it must if it becomes industrialized - will be a curse for other nations, a menace to the world.'

ಸ್ವಾಮಿ ವಿವೇಕಾನಂದರು ಗಾಂಧೀಜಿಗಿಂತ ಮೊದಲೇ ಕೈಗಾರಿಕೀಕರಣದ ದುಷ್ಟ ಪ್ರಭಾವಗಳನ್ನು ಊಹಿಸಿದ್ದರು. ಅವರ ಮಾತುಗಳು ದಿನಕಳೆದಂತೆ ಹೆಚ್ಚು ಹೆಚ್ಚು ಅರ್ಥ ಪಡೆಯುತ್ತಿವೆ. ಅಧಿಕ ಉತ್ಪಾದನೆಯು ಮನುಷ್ಯ ಸಂತೋಷವನ್ನು ಹೆಚ್ಚಿಸಲೋಸುಗ ಎಂದು ನಾವು ಭಾವಿಸುವುದಾದರೆ ನಮ್ಮ ಯಂತ್ರಗಳು ಮತ್ತು ಅವುಗಳು ಉಂಟುಮಾಡಿರುವ ಪರಿಣಾಮಗಳು ನಮ್ಮ ಕಣ್ಣೆದುರಿಗೇ ಇದೆಯಲ್ಲ, ನಾವೇಕೆ ಅವುಗಳನ್ನು ಗಮನಿಸುತ್ತಿಲ್ಲ? ಸ್ವಾಮೀಜಿಯವರ ಈ ಮಾತುಗಳನ್ನು ಗಮನಿಸಿ: 'I ask you, is the sum total of happiness in the world today is more than what it was a century ago?' ಮುಂದುವರಿದು ಹೇಳುತ್ತಾರೆ: 'If one nation becomes rich and powerful, it must be at the expense of another nation somewhere. Each piece of machinery that is invented will make twenty people rich and twenty thousand people poor.' ಅವರ ಪ್ರಕಾರ ಯಂತ್ರಗಳು ಬಡತನವನ್ನು ಪರಿಹರಿಸುವುದಿಲ್ಲ, ಅವು ಕೇವಲ ಮನುಷ್ಯನನ್ನು ತೀವ್ರವಾಗಿ ಹೆಣಗುವಂತೆ ಮಾಡುತ್ತವೆ ಮತ್ತು ಸ್ವಾರ್ಥ ಹೆಚ್ಚಾಗುತ್ತ ಹೋಗುತ್ತದೆ. ಅಧ್ಯಾತ್ಮರಹಿತವಾದ ಪ್ರಗತಿ ಅಭಿವೃದ್ಧಿಗಳು ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತವೆ ಎಂದು ಅವರು ಹೇಳಿದ್ದಾರೆ. ಇಂದು ಅಮರ್ತ್ಯಸೇನ್ ಅವರ ಸಂಶೋಧನೆಯ ಸಾರವೂ ಇದೇ ಆಗಿದೆ, ಅದಕ್ಕಾಗಿ ಅವರು ನೊಬೆಲ್ ಬಹುಮಾನವನ್ನೂ ಪಡೆದಿದ್ದಾರೆ. ಅವರ ಪ್ರಕಾರ ಅರ್ಧ ಗೋಳ ಶ್ರೀಮಂತವಾಗಬೇಕಾದರೆ ಇನ್ನರ್ಧ ಗೋಳ ಬಡವಾಗಲೇ ಬೇಕು. ಗಾಂಧೀಜಿಯವರ ಹಿಂದ್ ಸ್ವರಾಜ್, ಸ್ವಾಮಿ ವಿವೇಕಾನಂದರ ಈ ಮಾತುಗಳ ಮುಂದುವರಿಕೆಯಾಗಿ ಕಾಣುತ್ತದೆ. ಜಪಾನ್ ದೇಶದ ಬೆಂಕಿಪೊಟ್ಟಣದ ಕಾರ್ಖಾನೆಯನ್ನು ನೋಡಿ ಸ್ವಾಮೀಜಿ ಬೆರಗಾಗಿದ್ದು ನಿಜವಾದರೂ ಅದೇ ಪರಿಹಾರ ಎಂದು ಅವರು ಪರಿಗಣಿಸಲಿಲ್ಲ.

ಬಡವರನ್ನು ಅಂಚಿಗೆ ತಳ್ಳುವ, ಅಸಮಾನತೆಗೆ ಕಾರಣವಾಗುವ ಯಾವುದೇ ಅಭಿವೃದ್ಧಿಯನ್ನು ಗಾಂಧೀಜಿ ಒಪ್ಪಲಿಲ್ಲ. ಗಾಂಧೀಜಿಯವರ ಮಾತುಗಳನ್ನು ಗಮನಿಸಿ:

'I shall work for an India in which the poorest shall feel that it is their country, in whose working they have an effective voice, an India in which there will be no high class and low class of people, an India in which all communities shall live in harmony.'

ಯಾವ ಭಾರತಕ್ಕಾಗಿ ಗಾಂಧೀಜಿ ಕೆಲಸಮಾಡುತ್ತೇನೆಂದು ಹೇಳಿದ್ದರೋ ಆ ಭಾರತದ ಬಗ್ಗೆ ಇಂದು ಯಾರಿಗೆ ಕಾಳಜಿಯಿದೆ? ಇಂದಿನ ಅಭಿವೃದ್ಧಿ ಯಾರಿಗಾಗಿ ಮೀಸಲಿದೆ? 'ಜನಗಳಿಗಾಗಿ ಅಭಿವೃದ್ಧಿ ಎಂಬುದಕ್ಕಿಂತ ಅಭಿವೃದ್ಧಿಗಾಗಿ ಜನಗಳು' ಎಂಬಂತಾಗಿರುವ ಈ ದಿನಗಳಲ್ಲಿ ಪ್ರಜಾಪ್ರಭುತ್ವದ ನಿಜವಾದ ಅರ್ಥವೇನು ಎಂದು ಹುಡುಕಬೇಕಾಗಿದೆ! ಗಾಂಧೀಜಿಯವರ ಮಾತುಗಳನ್ನು ನಾವು ಇಂದು ಕೊಂಚ ಬದಲಿಸಿ ಹೇಳಬೇಕಾಗಿದೆ – 'ಅಲ್ಪಸಂಖ್ಯಾತರೂ ಇದು ನನ್ನ ದೇಶ ಎಂದು ಭಾವಿಸಬಹುದಾದ ಭಾರತಕ್ಕಾಗಿ ನಾವು ಕೆಲಸಮಾಡಬೇಕು!'

ಜಾಗತಿಕ ತಾಪಮಾನದ ಹೆಚ್ಚಳ, ಹವಾಮಾನ ವೈಪರೀತ್ಯ ಮುಂತಾದ ಪರಿಸರ ವೈಪರೀತ್ಯಗಳನ್ನು, ಅದರಿಂದುಂಟಾದ ಸಾವು ನೋವುಗಳನ್ನು ನೋಡುತ್ತಿರುವ ಇಂದಿನ ದಿನಮಾನದಲ್ಲಿ ಸ್ವಾಮೀಜಿಯವರ, ಗಾಂಧೀಜಿಯವರ ಮಾತುಗಳ ಮರ್ಮ ನಮಗೆ ತಿಳಿಯುತ್ತಿದೆ. ಗಾಂಧಿಯವರ ಸರಳಜೀವನದ ಪಾಠಗಳು ಇಂದಿಗೆ ಹಿಂದೆಂದಿಗಿಂತಲೂ ಹೆಚ್ಚು ಪ್ರಸ್ತುತ. ಚರಕವು ಶೋಷಣೆ ಮುಕ್ತ ಸಮಾಜದ ಸಂಕೇತ. ಹಾಗಾಗಿ ಗಾಂಧೀಜಿ ನನ್ನ 'ಖಾದಿ ಮನಸ್ಸು' ಎನ್ನುತ್ತಿದ್ದರು. 'ಖಾದಿ ಮನಸ್ಸು' ಚರಕ ನೂಲುವಾಗ ಧ್ಯಾನಿಸುವುದು ಇತರರ ಒಳಿತನ್ನು. ನನ್ನ ಜೀವನ ಮತ್ತು ಕಾಯಕ ಸಮಷ್ಟಿಯ ಹಿತಕ್ಕಾಗಿ ಎಂಬ ಪ್ರಜ್ಞೆಯನ್ನು ಜಾಗೃತಗೊಳಿಸುವ ಖಾದಿ ಮನಸ್ಸು ನಿಜವಾದ ಧಾರ್ಮಿಕ ಮನಸ್ಸು. ಗಾಂಧಿ ತತ್ತ್ವಗಳು ಶರಣರ ಕಾಯಕ ತತ್ತ್ವಗಳಿಗೆ ಅತ್ಯಂತ ಸಮೀಪವಾಗಿವೆ. ಆದರೆ ಈಗ ನಾವು ಸಂಪೂರ್ಣವಾಗಿ ಕೈಗಾರಿಕೀಕರಣಕ್ಕೆ ಶರಣಾಗಿ ನಮ್ಮ ನಿಜವಾದ ಭಾರತೀಯತೆಯನ್ನು ಕಳೆದುಕೊಂಡಿದ್ದೇವೆ. ಈ ಸಂದರ್ಭದಲ್ಲಿ ಕುವೆಂಪು ಅವರ ಮಾತುಗಳನ್ನು ಗಮನಿಸಿ: ''ಆತನ ದೇಹಕ್ಕೆ ಗುಂಡಿಕ್ಕಿ ಕೊಂದವನೇನೋ ಒಬ್ಬನೆ; ಆದರೆ ತರುವಾಯ ಆತನ ಧ್ಯೇಯಕ್ಕೆ ಉರುಳಿಕ್ಕಿ ಕೊಂದವರು ಹಲವರು ಆತನ ಅನುಯಾಯಿಗಳೆ! ನೆಹರೂ ಅವರ ಮುಂದಾಳುತನದ ನೇತೃತ್ವದಲ್ಲಿ ನಾವು ಗಾಂಧೀಜಿಯ ತತ್ತ್ವಗಳನ್ನೆಲ್ಲ ಮೂಲೆಗೊತ್ತಿ, ನಮ್ಮ ರಾಷ್ಟ್ರವನ್ನು ಅಭಿವೃದ್ಧಿಗೊಂಡ ಶ್ರೀಮಂತ ಪಾಶ್ಚಾತ್ಯ ದೇಶಗಳ ಸರಿಸಮಕ್ಕೇರಿಸುವ ಹುಮ್ಮಸ್ಸಿನಲ್ಲಿ ಸಂಪೂರ್ಣವಾಗಿ ಅವರ ಅನುಕರಣೆಗೆ ದೀಕ್ಷಿತರಾದೆವು.''

ಶಿಕ್ಷಣದ ಕುರಿತಾಗಿಯೂ ಈ ಇಬ್ಬರು ಮಹಾನುಭಾವರು ಒಂದೇ ಬಗೆಯ ನಿಲುವನ್ನು ತಾಳಿರುವುದು ಸ್ಪಷ್ಟವಾಗಿ ಕಾಣುತ್ತದೆ. ಸ್ವಾಮಿ ವಿವೇಕಾನಂದರು ಮಾತೃಭಾಷೆಯಲ್ಲಿ ಮಕ್ಕಳಿಗೆ ಕಲಿಸಿ ಎಂದು ಹೇಳಿದರೆ ಗಾಂಧೀಜಿಯವರ ಪ್ರಕಾರ ಮಾತೃಭಾಷೆ ಮಕ್ಕಳಿಗೆ ತಾಯಿಯ ಎದೆಹಾಲಿನಂತೆ; ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣ ಕೊಡಿಸುವ ಪೋಷಕರು ತಮ್ಮ ಮಕ್ಕಳಿಗೆ ಅನ್ಯಾಯ ಮಾಡುತ್ತಿದ್ದಾರೆ ಮತ್ತು ಮಕ್ಕಳನ್ನು ಈ ದೇಶದ ಸೇವೆಗೆ ಅನರ್ಹರನ್ನಾಗಿ ಮಾಡುತ್ತಿದ್ದಾರೆ ಎಂಬುದೇ ನನ್ನ ನಂಬಿಕೆ ಎನ್ನುತ್ತಾರೆ ಅವರು. ಕೊಠಾರಿ ಆಯೋಗದ ಶಿಫಾರಸ್ಸುಗಳಾಗಲಿ, ಜಗತ್ತಿನಾದ್ಯಂತ ಭಾಷಾವಿಜ್ಞಾನದ ಸಂಶೋಧನೆಗಳಾಗಲಿ ಮಗುವಿನ

ಪರಿಚಿತ ಭಾಷೆಯಲ್ಲಿ ಶಿಕ್ಷಣ ಕೊಡುವುದನ್ನು ಶಿಫಾರಸ್ಸು ಮಾಡಿದರೂ ಅನುಕರಣಾ ಪ್ರವೃತ್ತಿಯನ್ನೇ ಎತ್ತಿಹಿಡಿಯುವ ನಮ್ಮ ಸರ್ಕಾರಗಳು ಇಂಗ್ಲಿಷ್ ಮಾಧ್ಯಮ ಶಿಕ್ಷಣವನ್ನು ಆದ್ಯತೆಯ ಮೇಲೆ ಕೊಡುತ್ತಿರುವುದು ದುರದೃಷ್ಟಕರವೇ ಸರಿ.

ಇಂದು ಜಗತ್ತಿನ ಅತಿ ಹೆಚ್ಚು ಹಾನಿಗೆ ಕಾರಣರಾಗಿರುವವರು ಸುಶಿಕ್ಷಿತರೇ ಹೊರತು ಅಶಿಕ್ಷಿತರಲ್ಲ. ಇದಕ್ಕೆ ಕಾರಣ ಸ್ಪಷ್ಟವಾಗಿಯೇ ಇದೆ. ಅನವಶ್ಯ ಸ್ಪರ್ಧೆ ಮತ್ತು ತುಳಿದು ಮೇಲೇರುವ ಅನೈತಿಕ ಯಶಸ್ಸಿನ ಹಂಬಲ ಶಿಕ್ಷಣದ ಮೂಲ ಪ್ರೇರಣೆಯಾಗಿ ಪರಿಣಮಿಸಿದೆ. ಇದಕ್ಕೆ ಪರಿಹಾರವೋ ಎಂಬಂತೆ ಇರುವ ವಿವೇಕಾನಂದರ ಮಾತುಗಳನ್ನು ಗಮನಿಸಿ:

'What is Education? Is it book learning? No. Is it diverse knowledge? Not even that. The training by which the current and expression of will are brought under control and become fruitful is called Education.'

ಗಾಂಧೀಜಿಯವರು ಹೇಳುತ್ತಾರೆ: 'Education without character will only produce educated rascals.' ಶೀಲನಿರ್ಮಾಣವೇ ಶಿಕ್ಷಣ ಎಂಬುದನ್ನು ಎಲ್ಲ ಪ್ರಜ್ಞಾವಂತರೂ ಆಗಾಗ ಪುನರುಚ್ಚರಿಸಿದ್ದಾರೆ. ಈ ಇಬ್ಬರೂ ಸಹ ಉನ್ನತ ಶಿಕ್ಷಣದ ಕುರಿತಾಗಿ ಉತ್ಸಾಹ ತಾಳಿರಲಿಲ್ಲ. ವಿವೇಕಾನಂದರು ಉನ್ನತ ಶಿಕ್ಷಣದ ಕುರಿತಾಗಿ ಹೀಗೆ ಹೇಳುತ್ತಾರೆ: "Take your universities, what have they done during the 50 years of their existence? They have not produced one original man. They are merely an examining body." ಮತ್ತೆ ಹೇಳುತ್ತಾರೆ: "What does it matter if this higher education remains or goes. It would be better if the people got a little technical education so that they might find work and earn their bread instead of dawdling about and crying for service."

ಗಾಂಧೀಜಿಯವರ ನಯೀತಾಲೀಮು ಮಕ್ಕಳಿಗೆ ಕೈಕೆಲಸವನ್ನು ಕಲಿಸುವುದನ್ನು ಪ್ರಧಾನವಾಗಿ ಪರಿಗಣಿಸಿತ್ತು. ಇಂಗ್ಲಿಷ್ ಕಲಿತ ಸುಶಿಕ್ಷಿತರು ತಮ್ಮನ್ನೇ ತಾವು ಬಡಜನರಿಂದ, ನಿರಕ್ಷರ ಕುಕ್ಷಿಗಳಿಂದ ಬೇರ್ಪಡಿಸಿಕೊಂಡು ತಮಗೂ ಸಮಾಜದ ಸಮಸ್ಯೆಗೂ ಸಂಬಂಧವಿಲ್ಲದಂತೆ ವರ್ತಿಸುತ್ತಾರೆ. "Higher education makes us foreigners in our country" ಎನ್ನುತ್ತಾರೆ ಗಾಂಧೀಜಿಯವರು. ವಿವೇಕಾನಂದರ ಈ ಮಾತುಗಳನ್ನು ಗಮನಿಸಿ: 'The education which does not help common mass to equip themselves for the struggle of life, which does not bring out the strength of character....is it worth the name?'

ವಿವೇಕಾನಂದರು ಅಸ್ಪೃಶ್ಯತೆಯನ್ನು ತೀವ್ರವಾಗಿ ಖಂಡಿಸಿದವರು. ಕೇರಳದ ಅಸ್ಪೃಶ್ಯತೆಯನ್ನು ಕಂಡು 'ಈ ಮಲಬಾರಿನ ಜನಕ್ಕೆ ಹುಚ್ಚುಹಿಡಿದಿರಬೇಕು' ಎಂದರು. ಅಸ್ಪೃಶ್ಯತೆಯ ಪರಿಣಾಮವಾಗಿ ಕಳೆದುಕೊಂಡ ಘನತೆಯನ್ನು ಮರಳಿ ಪಡೆಯಲು ಜನ ಮತಾಂತರವಾಗುತ್ತಿರುವ ವಿಷಯವನ್ನು ಕುರಿತೂ ಚರ್ಚಿಸಿದರು. ನಮ್ಮಂತೆಯೇ ಇರುವ ನಮ್ಮ ಜನರನ್ನು ಅಸ್ಪೃಶ್ಯತೆಯ ಹೆಸರಿನಲ್ಲಿ ದೂರ ಇಟ್ಟಿದ್ದರಿಂದ ಚಾರಿತ್ರಿಕವಾಗಿ ಇಡೀ ಇಂಡಿಯಾ ದೇಶ ದೇವರ ಶಾಪಕ್ಕೆ ಗುರಿಯಾಗಿದೆ; ಹಾಗಾಗಿ ನಾವು ಬ್ರಿಟಿಷರ ಆಳ್ವಿಕೆಗೆ ಗುರಿಯಾಗಿದ್ದೇವೆ ಎಂಬ ಅಭಿಪ್ರಾಯವನ್ನೂ ಅವರು ವ್ಯಕ್ತಪಡಿಸಿದ್ದುಂಟು. ಗಾಂಧೀಜಿಯವರು ಅಸ್ಪೃಶ್ಯತೆಯನ್ನು ತೊಲಗಿಸಲು ಇನ್ನಿಲ್ಲದಂತೆ ಶ್ರಮಿಸಿದ ವಿಚಾರ ಈಗ ಚರಿತ್ರೆ.

ಸ್ತ್ರೀಯರ ಅಭಿವೃದ್ಧಿಯ ಕುರಿತಾಗಿಯೂ ಗಾಂಧೀಜಿ ಮತ್ತು ಸ್ವಾಮಿ ವಿವೇಕಾನಂದರ ಅಭಿಪ್ರಾಯಗಳು ಆಧುನಿಕ ಒಳನೋಟಗಳನ್ನು ಒಳಗೊಂಡಿವೆ. ಪುರುಷಪ್ರಧಾನವಾದ ಈ ಸಮಾಜದಲ್ಲಿ ಮಹಿಳೆಯರಿಗೆ ಚಾರಿತ್ರಿಕವಾಗಿ ಅನ್ಯಾಯಗಳಾಗಿವೆ. ಈ ಅನ್ಯಾಯವನ್ನು ಸರಿಪಡಿಸುವ, ಸ್ತ್ರೀಸಮಾನತೆಯನ್ನು ಗೌರವಿಸುವ ಇವರ ಹೇಳಿಕೆಗಳು ಇಂದಿಗೂ ನಮಗೆಲ್ಲಾ ಆದರ್ಶಪ್ರಾಯವಾಗಿವೆ. ಸ್ವಾಮೀಜಿ ಹೇಳುತ್ತಾರೆ: 'ಸ್ತ್ರೀಯರ ಸ್ಥಿತಿಯನ್ನು ಸುಧಾರಿಸದ ಹೊರತು ಜಗತ್ತಿನ ಏಳಿಗೆಗೆ ಅವಕಾಶವಿಲ್ಲ. ಒಂದು ರೆಕ್ಕೆಯ ಬಲದಿಂದ ಪಕ್ಷಿ ಹಾರಲಾರದು.' ಈ ಮಹನೀಯರಿಬ್ಬರೂ ಪ್ರತಿಪಾದಿಸಿದ ಸ್ತ್ರೀಸಮಾನತೆಯ ಹಿಂದೆ ಕೇವಲ ಮಹಿಳೆಯರ ಅಭ್ಯುದಯ ಮಾತ್ರ ಇಲ್ಲ. ಸ್ತ್ರೀಸಂಕುಲವನ್ನು ಗೌರವಿಸುವ, ಅವರ ಬಲಸಂವರ್ಧನೆಯನ್ನು ಮಾಡುವ ಉದ್ದೇಶದ ಹಿಂದೆ ಇಡೀ ಸಮಾಜದ ಏಳಿಗೆಗೆ ಮಹಿಳೆಯರ ಸಬಲೀಕರಣ ಅನಿವಾರ್ಯವಾಗಿ ಆಗಲೇಬೇಕೆಂಬುದು ಇವರ ಅಭಿಪ್ರಾಯ. ಸ್ವಾಮೀಜಿಯವರು ಹೇಳುತ್ತಾರೆ: ''ಮೊದಲು ನಿಮ್ಮ ಮಹಿಳೆಯರಿಗೆ ಶಿಕ್ಷಣ ನೀಡಿ. ಬಳಿಕ ಅವರನ್ನು ಅವರಷ್ಟಕ್ಕೆ ಬಿಟ್ಟುಬಿಡಿ. ಆಗ ತಮಗೆ ಅಗತ್ಯವಾದ ಸುಧಾರಣೆ ಯಾವುದೆಂಬುದನ್ನು ಅವರೇ ಹೇಳುತ್ತಾರೆ. ಮಹಿಳೆಯರ ಅಭಿವೃದ್ಧಿಯನ್ನು ಪುರುಷರು ನಿರ್ದೇಶಿಸುವುದು ಎಷ್ಟು ಹಾಸ್ಯಾಸ್ಪದ!' ಈ ಸಲಹೆ ಸ್ತ್ರೀವಿಮೋಚನೆಗೆ ಹಾಕಿರುವ ಪ್ರಥಮ ಸೋಪಾನ. ಸ್ವಾವಲಂಬನೆ, ಆತ್ಮವಿಶ್ವಾಸಗಳನ್ನು ಮಹಿಳೆಯರಲ್ಲಿ ತುಂಬುವ ಮೂಲಕ ಅವರ ಅಭ್ಯುದಯಕ್ಕೆ ಧೀಮಂತ ಮಾರ್ಗವನ್ನು ಹಾಕಿಕೊಡಬೇಕು. 'ಅವಶ್ಯವಿದ್ದಲ್ಲಿ ಮಹಿಳೆಯರು ಜೀವನನಿರ್ವಹಣೆಗೆ ತಾವೇ ಸಂಪಾದಿಸಲು ಸಾಧ್ಯವಾಗಬೇಕು' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಗಾಂಧೀಜಿಯವರು ಸ್ತ್ರೀಯರ ಕುರಿತಾಗಿ ಆಡಿರುವ ಮಾತುಗಳು ತಮ್ಮದೇ ಅನುಭವದಿಂದ ಕಂಡುಕೊಂಡ ಮಾತುಗಳು. ಒಬ್ಬ ಪತಿಯಾಗಿ ತಮ್ಮ ಸಹಧರ್ಮಿಣಿಯೊಡನೆ ಅನ್ಯೋನ್ಯವಾಗಿ ಬಹಳ ಕಾಲ ಬಾಳಿದಾಗ ಕಂಡುಬರುವ ಸತ್ಯಗಳನ್ನೇ ಅವರು ಪ್ರಾಮಾಣಿಕವಾಗಿ ಆಡಿದ್ದಾರೆ. ಅವರ ಮಾತುಗಳನ್ನು ಗಮನಿಸಿ:

'Of all the evils for which man has made himself responsible, none is so degrading, so shocking or so brutal as his abuse of the better half of the humanity. The female sex, not the weaker sex, it is the nobler of the two.'

ಪುರುಷರಿಗೆ ಸಾಧ್ಯವಾಗದ ಅನೇಕ ಸಾಧ್ಯತೆಗಳನ್ನು ಪ್ರಕೃತಿ ಸ್ತ್ರೀಯರಿಗೆ ನೀಡಿದೆ. ಅದನ್ನು ಗುರುತಿಸಿ, ಗೌರವಿಸುವ ಮನೋಧರ್ಮ ಬೆಳೆಸಿಕೊಳ್ಳಲು ಗಾಂಧೀಜಿ ಕರೆ ಇತ್ತಿದ್ದಾರೆ. ಗಂಡು ಮಕ್ಕಳೇ ಬೇಕೆಂದು, ಹೆಣ್ಣು ಮಕ್ಕಳ ಜನನ ಕುಟುಂಬಕ್ಕೆ ತೊಡಕು ಎಂದು ಭಾವಿಸುವ ಸಂಪ್ರದಾಯ ನಮ್ಮಲ್ಲಿದೆ. ಈ ಸಂದರ್ಭದಲ್ಲಿ ಗಾಂಧೀಜಿಯವರ ಈ ಮಾತುಗಳನ್ನು ನೋಡಿ:

"As long as she (women) has not the same right in law as man, as long as the birth of a girl does not receive the same welcome as that of a boy, so long we should know that the India is suffering from partial paralysis."

ವಿವೇಕಾನಂದರು ಶ್ರೀಮಾತೆ ಶಾರದಾದೇವಿಯವರನ್ನು ಗೌರವಿಸುವುದರ ಮೂಲಕ ಸಮಸ್ತ ಸ್ತ್ರೀಸಂಕುಲವನ್ನೇ ಗೌರವಿಸಿದರು. ಶ್ರೀಮಾತೆಯವರ ವಿಷಯದಲ್ಲಿ ತಮ್ಮ ಆದರ ಪರಮ ಗುರು ಶ್ರೀರಾಮಕೃಷ್ಣರಿಗಿಂತಲೂ ಒಂದು ಕೈ ಹೆಚ್ಚು ಎನ್ನುವ ಮೂಲಕ ಜಗತ್ತಿನ ಎಲ್ಲ ಸ್ತ್ರೀಯರಿಗೆ ನೀಡಬೇಕಾದ ಪ್ರಾಧಾನ್ಯವನ್ನು ಸೂಚ್ಯವಾಗಿ ತಿಳಿಸಿದರು. ಅಮೆರಿಕದ ಭಾಷಣದಲ್ಲಿ 'Sisters and Brothers of America' ಎಂದರೇ ಹೊರತು 'Brothers and sisters of America' ಎನ್ನಲಿಲ್ಲ. ಅಲ್ಲೂ ಅವರ ಆದ್ಯತೆ ಮಹಿಳೆಯರಿಗಾಗಿಯೇ ಇತ್ತು.

ಇನ್ನು ಸ್ವಾವಲಂಬಿ ಗ್ರಾಮಸ್ವರಾಜ್ಯದ ಪರಿಕಲ್ಪನೆಯ ಹಿಂದೆ ಗಾಂಧೀಜಿ ಒಂದು ಜನಸಮುದಾಯದ ಸ್ವಾತಂತ್ರ್ಯವನ್ನು ಎತ್ತಿಹಿಡಿದರು. ತಮ್ಮನ್ನು ತಾವು ಆಳಿಕೊಳ್ಳುವ, ಆರ್ಥಿಕವಾಗಿ, ರಾಜಕೀಯವಾಗಿ ಹೊರಗಿನದನ್ನು ಅವಲಂಬಿಸದಿರುವ ಸ್ವಾಯತ್ತತೆಯ ಸ್ವಾವಲಂಬಿ ಗ್ರಾಮಸ್ವರಾಜ್ಯದ ಕನಸು ಗಾಂಧೀಜಿಯವರದು. ಸರ್ಕಾರಗಳು ಅತಿಯಾಗಿ ತನ್ನ ರಾಜ್ಯಗಳನ್ನು ಆಳ್ವಿಕೆಗೆ ಒಳಪಡಿಸುವುದನ್ನು ಗಾಂಧೀಜಿ ಹೇಗೆ ವಿರೋಧಿಸಿದರೋ ಹಾಗೆಯೇ ಸ್ವಾಮೀಜಿಯವರು ಸಹ ವಿರೋಧಿಸಿದರು. ಸ್ವಾಮೀಜೀಯವರ ಈ ಮಾತುಗಳು ಮನನಾರ್ಹವಾಗಿವೆ:

"Liberty of thought and action is the only condition of life, of growth and well-being. Where it does not exist, the man, the race, the nation must go down. Just as man must have liberty to think and speak, so he must have liberty in food, dress and marriage and in every other thing, so long as he does not injure others."

ಹೀಗೆ ಸ್ವಾಮಿ ವಿವೇಕಾನಂದರು ಮತ್ತು ಗಾಂಧೀಜಿಯವರು ನಮ್ಮ ದೇಶದ ನಾಡಿಬಡಿತವನ್ನು ಸರಿಯಾಗಿ ಗ್ರಹಿಸಿ ಬಹುತ್ವದಿಂದ ಕೂಡಿದ ಭಾರತದ ಸಂಸ್ಕೃತಿ ಮತ್ತು ಅಭಿವೃದ್ಧಿಗಳ ಸ್ವರೂಪ ಏನಿರಬೇಕು ಎಂಬುದನ್ನು ತಮ್ಮ ಮಾತು ಮತ್ತು ಕೃತಿಗಳಿಂದ ತಿಳಿಯಪಡಿಸಿದರು. ಜಗತ್ತಿನ ಬೇರೆಲ್ಲ ದೇಶಗಳಿಗಿಂತ ಭಾರತೀಯ ಅಸ್ಮಿತೆ ಭಿನ್ನವಾಗಿರುವ ಬಗ್ಗೆ ಮತ್ತು ಅದಕ್ಕೆ ಕಾರಣವಾಗಿರುವ ಆಧ್ಯಾತ್ಮಿಕತೆಯನ್ನು ಕುರಿತು ಅವರು ಆಡಿರುವ ಮಾತುಗಳಲ್ಲಿ ಅಸಾಧಾರಣ ಸಾಮ್ಯಗಳಿರುವುದನ್ನು ನಾವು ಈವರೆಗೆ ನೋಡಿದೆವು. ಅಲ್ಲದೆ ಈ ಆಧ್ಯಾತ್ಮಿಕತೆಯ ಜಗತ್ ಕಲ್ಯಾಣ ಗುಣಗಳನ್ನು ಕುರಿತು ಇಬ್ಬರೂ ಮಹನೀಯರು ಕೇವಲ ಅಂಧಾಭಿಮಾನದಿಂದಲ್ಲ, ದೂರದೃಷ್ಟಿಯ ವಾಸ್ತವತೆಯ ನೆಲೆಯಲ್ಲಿ ಮಾತನಾಡಿದ್ದಾರೆ, ಅಂತಹ ಒಂದು ನವಭಾರತ ನಿರ್ಮಾಣದ ಕನಸಿಗಾಗಿ ಇಡೀ ಜೀವನವನ್ನೇ ಸವೆಸಿದ್ದಾರೆ.

ಇಂದು ರಾಮಕೃಷ್ಣ ವಿವೇಕಾನಂದರ ಮತ್ತು ಗಾಂಧೀಜಿಯವರ ಸಂದೇಶಗಳು ಭಾರತವನ್ನು ಧರ್ಮಸಮನ್ವಯದ ನಾಡನ್ನಾಗಿ ಮಾಡಬಹುದಾದ ಏಕಮಾತ್ರ ಸಾಧನವಾಗಿ ಕಂಡು ಬರುತ್ತಿವೆ. ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದ ದಿನದಂದು ಆಗ ಕರಾಚಿಯಲ್ಲಿರುವ ರಾಮಕೃಷ್ಣ ಮಿಷನ್ನಿನ ಶಾಖೆಯ ಮುಖ್ಯಸ್ಥರಾಗಿದ್ದ ಸ್ವಾಮಿ ರಂಗನಾಥಾನಂದರು 'Swami Vivekananda and the future of India' ಎಂಬ ಲೇಖನವನ್ನು ಬರೆದು ಕರಾಚಿಯ ಒಂದು ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಇದೇ ಲೇಖನವನ್ನು ಮುಂದೆ ೨೦೦೮ರಲ್ಲಿ 'Swami Vivekananda and the Erasing of the Dividing Line' ಎಂಬ ಶೀರ್ಷಿಕೆಯಲ್ಲಿ ಕೊಲ್ಕತದ ಅದ್ವೈತ ಆಶ್ರಮವು ಕಿರುಹೊತ್ತಿಗೆಯ ರೂಪದಲ್ಲಿ ಮರುಪ್ರಕಟಿಸಿತು. ಇಂದು ಈ ಕಿರುಹೊತ್ತಿಗೆಯ ಅರ್ಪಣೆಯ ಪುಟ ವಿಶೇಷವಾಗಿ ನಮ್ಮ ಗಮನವನ್ನು ಸೆಳೆಯುತ್ತದೆ. ಯಾವ ಮಹತ್ತರ ಉದ್ದೇಶಕ್ಕಾಗಿ ಅರ್ಪಣೆ ಮಾಡಲಾಗಿದೆ ಎಂಬುದರ ಒಕ್ಕಣೆಯ ಮಾತುಗಳು ಹೀಗಿವೆ:

"Our dream is to see an ideal, secular, democratic and unified India where all the communities would live in harmony, peace and prosperity. To such a dream we dedicate this booklet."

ರಾಮಕೃಷ್ಣ-ವಿವೇಕಾನಂದರಿಂದ ಪ್ರಣೀತವಾಗಿ ಗಾಂಧೀಜಿಯವರಿಂದ ಅನುಷ್ಠಾನಸಾಧ್ಯವಾದ ರಾಷ್ಟ್ರೀಯ ಮೌಲ್ಯಗಳು ಇಲ್ಲಿ ಸ್ಪಷ್ಟರೂಪವನ್ನು ಪಡೆದಿದ್ದು ಈ ಮಾತುಗಳನ್ನು ದೇಶದ ಸಮಸ್ತಜನರೂ ಮನನ ಮಾಡಬೇಕಾಗಿದೆ. ಆ ಮೂಲಕವೇ ನಾವಿಂದು ದೇಶದಲ್ಲಿ ಸೌಹಾರ್ದ ಸಾಮರಸ್ಯಗಳನ್ನು ಸ್ಥಾಪಿಸಬಹುದಾಗಿದೆ. *(ಸಮಾಪ್ತಿ)*